**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**

**ದಕ್ಷಿಣ ಕನ್ನಡ, ಮಂಗಳೂರು.**

**ಸ್ಪೆಷಲ್ ಕೇಸ್ ನಂಬ್ರ 124/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪಂಕಜ್ ಕುಮಾರ್ ಪಾಂಡೆ | ಪ್ರಾಸಾಃ 3 |
| ತಂದೆಯ ಹೆಸರು | : | ಡಿ. ಎಂ. ಪಾಂಡೆ | ಚಾಸಾಃ 3 |
| ಪ್ರಾಯ | : | 46 ವರ್ಷ | **ದಿನಾಂಕಃ 25.11.2022** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಕಾರ್ಯದರ್ಶಿ, ವಾಣಿಜ್ಯ ಇಲಾಖೆ | |
| ವಾಸಸ್ಥಳ | : | ಬೆಂಗಳೂರು. | |

ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ

ನಾನು ಜುಲೈ 2018 ರಿಂದ ಫೆಬ್ರವರಿ 2021 ರ ವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರಿನಲ್ಲಿ ಆಯುಕ್ತನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿನಾಂಕ 16.11.2018 ರಂದು ಎ.ಸಿ.ಬಿ. ಯ ಎ.ಡಿ.ಜಿ.ಪಿ. ಇವರು 2 ನೇ ಆರೋಪಿ ಲೀಲಾವತಿ ಇವಳನ್ನು ಅಭಿಯೋಜನೆಗೆ ಒಳಪಡಿಸಲು ಅನುಮತಿ ನೀಡಬೇಕೆಂದು ಪತ್ರವನ್ನು ನಮ್ಮ ಕಛೇರಿಗೆ ಕಳುಹಿಸಿದ್ದರು. ಆ ಪತ್ರದೊಂದಿಗೆ ಪ್ರಥಮ ವರ್ತಮಾನ ವರದಿ, ಮಹಜರುಗಳು, ಆರೋಪಿಯ ಆಸ್ತಿಗಳ ಕುರಿತು ಸಂಗ್ರಹಿಸಿದಂತಹ ಇತ್ಯಾದಿ ದಾಖಲೆಗಳನ್ನು ಕಳುಹಿಸಿಕೊಟ್ಟಿದ್ದರು. ಅವುಗಳ ವಿವರವನ್ನು ನಾನು ಅನುಕ್ರಮ ನಂಬರ್ 1 ರಿಂದ 187 ರಲ್ಲಿ ನನ್ನ ಆದೇಶದಲ್ಲಿ

ಕಾಣಿಸಿರುತ್ತೇನೆ.

3. 2 ನೇ ಆರೋಪಿ ನಮ್ಮ ಇಲಾಖೆಯಲ್ಲಿ ಹಿರಿಯ ಮಹಿಳಾ ಆರೋಗ್ಯ ಸಹಾಯಕಿ ಎಂದು ಕಾರ್ಯನಿರ್ವಹಿಸುತ್ತಿದ್ದಳು. ಅವಳನ್ನು ಕರ್ತವ್ಯದಿಂದ ತೆಗೆದು ಹಾಕುವಂತಹ ಅಧಿಕಾರ ನನಗೆ ಇತ್ತು. ನಾನು ಪೊಲೀಸರು ಕಳುಹಿಸಿಕೊಟ್ಟಂತಹ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ಆ ರೀತಿ ಪರಿಶೀಲನೆ ಮಾಡಿದ ನಂತರ 2 ನೇ ಆರೋಪಿ ಪಿ.ಸಿ. ಕಾನೂನು ಕಲಂ 13(1)(ಇ) ಸಹಕಲಂ 13(2) ಅಪರಾಧ ಎಸಗಿದ್ದಾಳೆಂದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಅವಳನ್ನು ಅಭಿಯೋಜನೆಗೆ ಒಳಪಡಿಸಲು ದಿನಾಂಕ 07.11.2019 ರಂದು ಪೂರ್ವಾನುಮತಿಯನ್ನು ನೀಡಿರುತ್ತೇನೆ. ಸಾಕ್ಷಿ ತಾನು ನೀಡಿದ ಪೂರ್ವಾನುಮತಿಯನ್ನು ಗುರುತಿಸಿದ್ದು, ಅದನ್ನು ನಿಶಾನೆ ಪಿ.4 ಮತ್ತು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>

4. 1 ನೇ ಆರೋಪಿ ಸರಕಾರಿ ಕೆಲಸದಲ್ಲಿ ಇದ್ದನು. ಆದರೆ ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದನು ಎಂಬುದು ಗೊತ್ತಿಲ್ಲ. 2 ನೇ ಆರೋಪಿಯನ್ನು ಅಭಿಯೋಜನೆಗೆ ಒಳಪಡಿಸಲು ಪೂರ್ವಾನುಮತಿಯನ್ನು ನೀಡುವ ಮೊದಲು ನಾನು 1 ನೇ ಆರೋಪಿ ಕಾರ್ಯನಿರ್ವಹಿಸುತ್ತಿದ್ದಂತಹ

ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಯಾವುದೇ ಮಾಹಿತಿಗಳನ್ನು ಪಡೆದುಕೊಂಡಿಲ್ಲ. ಪೊಲೀಸರು ನನಗೆ 1 ನೇ ಆರೋಪಿ ಸಲ್ಲಿಸಿದಂತಹ ನಿಪಿ.4 ರಲ್ಲಿ ಕಾಣಿಸಿದಂತಹ ಅನುಕ್ರಮ ಸಂಖ್ಯೆ 187 ರಲ್ಲಿರುವ ದಾಖಲೆಗಳನ್ನು ಒದಗಿಸಿದ್ದರು. ಅದರಲ್ಲಿ 1 ನೇ ಆರೋಪಿಯ ಆಸ್ತಿಗಳ ವಿವರ, ಆತನ ವೆಚ್ಚದ ವಿವರ ಮತ್ತು ಆದಾಯ ವಿವರ ಇದ್ದವು ಅಂದರೆ ಸರಿ.

5. ಪೊಲೀಸರು ತಮ್ಮ ವರದಿಯಲ್ಲಿ ಕಾಣಿಸಿದ 1 ಮತ್ತು 2 ನೇ ಆರೋಪಿತರ ಆಸ್ತಿ,ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಕ್ರಮ ಸಂಖ್ಯೆ 187 ರಲ್ಲಿ ನೀಡಿದ ಅನುಬಂಧಗಳೊಂದಿಗೆ ತುಲನೆ ಮಾಡಿದಾಗ ಅವುಗಳಲ್ಲಿ ವ್ಯತ್ಯಾಸ ಇತ್ತೋ ಅಥವಾ ಇಲ್ಲವೋ ಎಂಬುದು ಈಗ ನೆನಪಿರುವುದಿಲ್ಲ. ನಾನು ಪೊಲೀಸರು ತೋರಿಸಿದಂತಹ ಆಸ್ತಿ, ಆದಾಯ, ವೆಚ್ಚಗಳ ವಿವರಗಳನ್ನು ಯಥಾವತ್ತಾಗಿ ನಂಬಿ ಅದೇ ಆಧಾರದ ಮೇಲೆ ಪೂರ್ವಾನುಮತಿಯನ್ನು ನೀಡಿರುತ್ತೇನೆ. ಪ್ರತೀಯೊಂದು ಐಟಂಗಳ ವಿವರಗಳ ಸತ್ಯಾಸತ್ಯತೆಗಳನ್ನು ನಾನು ಕಂಡುಕೊಂಡಿಲ್ಲ. ನಿಪಿ.4 ರಲ್ಲಿ ಪುಟ ಸಂಖ್ಯೆ 9 ರಲ್ಲಿ ಕಾಣಿಸಿದಂತಹ ಆಸ್ತಿಗಳ ಮೌಲ್ಯ ರೂ.1,22,70,857/- ಹಾಗೂ ಬಲ್ಲ ಮೂಲಗಳಿಗಿಂತ ಹೆಚ್ಚು ಹೊಂದಿದಂತಹ ಆಸ್ತಿಯ ಮೌಲ್ಯ ರೂ.81,70,857/- ಮತ್ತು ಪ್ರತಿಶತ 199.28 ಎಂಬ ಅಂಶವನ್ನು ಯಾವ ಆಧಾರದ ಮೇಲೆ ಕಂಡು ಕೊಂಡಿದ್ದೀರಾ ಎಂದು ಕೇಳಿದಾಗ ಸಾಕ್ಷಿ ಪೊಲೀಸರ ವರದಿಯಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. ಯಾವ

ವರದಿ ಎಂದು ಕೇಳಿದಾಗ ಸಾಕ್ಷಿ ಆ ವರದಿ ಎಲ್ಲಿದೆ ಎಂದು ಈಗ ತೋರಿಸಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ಅಂತಹ ಅಂಕಿ ಸಂಖ್ಯೆಯನ್ನು ಪೊಲೀಸರು ನನಗೆ ಕಳುಹಿಸಿಕೊಟ್ಟಂತಹ ಯಾವುದೇ ದಾಖಲೆಗಳಲ್ಲಿ ಅಥವಾ ವರದಿಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ ಇದ್ದದ್ದಕ್ಕಾಗಿ ಅಂತಹ ಸಂಖ್ಯೆಯನ್ನು ತಪ್ಪಾಗಿ ನಮೂದಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಪೊಲೀಸರು ಕಳುಹಿಸಿಕೊಟ್ಟಂತಹ ದಾಖಲೆಗಳನ್ನು ಪರಿಶೀಲನೆ ಮಾಡದೇ ತಾಂತ್ರಿಕವಾಗಿ ಪೂರ್ವಾನುಮತಿಯ ಆದೇಶವನ್ನು ನೀಡಿದ್ದೇನೆ ಅಂದರೆ ಸರಿಯಲ್ಲ. 2 ನೇ ಆರೋಪಿಯನ್ನು ಅಭಿಯೋಜನೆಗೆ ಒಳಪಡಿಸಲು ಪೂರ್ವಾನುಮತಿಯನ್ನು ನೀಡುವ ಅಧಿಕಾರ ನನಗೆ ಇರಲಿಲ್ಲ ಅಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.